# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

**ಎಸ್‌ಸಿ. 110/2017**

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ವಿಶ್ವನಾಥ | | *ಪ್ರಮಾಣ ಮಾಡಿಸಿದ ದಿನಾಂಕಃ* |
| **ತಂದೆ ಹೆಸರು** | ಃ ಲೇಟ್. ರಘು | | **13.02.2020** |
| **ವಯಸ್ಸು** | ಃ 43 ವರ್ಷ | | |
| **ವೃತ್ತಿ** | ಃ ವ್ಯಾಪಾರ | **ಪ್ರಾ.ಸಾ.** ಃ | **01** |
| **ವಾಸಸ್ಥಳ** | ಃ ಮೈಸೂರು | **ಚಾ.ಸಾ.** ಃ | **01** |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ನನಗೆ ಮೃತ ಕೃಷ್ಣ ಈತನ ಪರಿಚಯ ಇರುತ್ತದೆ. ಮೃತ ಕೃಷ್ಣ ಈತನು ನನಗೆ ಸಂಬಂಧಿಕನಾಗಬೇಕು. ಸುಮಾರು *3* ವರ್ಷದ ಹಿಂದೆ ದಿನಾಂಕಃ *23.12.2016* ರಂದು ನಾನು ಮಕ್ಕಳನ್ನು ಶಾಲೆಗೆ ಬಿಟ್ಟು ಹೈವೇ-*18* ಹೋಟೇಲ್ ನಲ್ಲಿ ನಮ್ಮ ಸ್ನೇಹಿತ ದಯಾನಂದ ಸಾಗರ್ ಮತ್ತು ಇತರರು ಟೀ ಕುಡಿಯಲು ಕುಳಿತಿದ್ದಾಗ ಅಂದಾಜು ಬೆಳಗ್ಗೆ *9.00* ಗಂಟೆಯ ಸಮಯಕ್ಕೆ ಆತನ ಸ್ನೇಹಿತ ಮಂಜುನಾಥ ಈತನು ಬಂದು ನನಗೆ ಕೃಷ್ಣ ಈತನಿಗೆ ವಿ.ವಿ.ಪುರಂ *6* ನೇ ಮೇನ್ ರಸ್ತೆಯಲ್ಲಿ ಬಿದ್ದಿರುತ್ತಾನೆ ಎಂದು ತಿಳಿಸಿರುತ್ತಾನೆ. ನಾನು ನನ್ನ ಸ್ನೇಹಿತರ ಜೊತೆ ಸೇರಿಕೊಂಡು ಕೃಷ್ಣ ಈತನನ್ನು ಅಪೋಲೋ ಆಸ್ಪತ್ರೆಗೆ ಸೇರಿಸಿದನು. ನಂತರ ಕೃಷ್ಣ ಈತನು *1* ಗಂಟೆಯ ನಂತರ ಮೃತಪಟ್ಟನು. ನಂತರ ನಾನು ಫಿರ್ಯಾದಿ ಕೊಟ್ಟಿರುತ್ತೇನೆ. ಸದರಿ ಫಿರ್ಯಾದಿಯನ್ನು ನಿ.ಪಿ.*1* ಎಂದು, ಅದರ ಮೇಲಿರುವ ಸಾವಿಕ್ಷಿಯ ಸಹಿಯನ್ನು ನಿ.ಪಿ.*1(ಎ)* ಎಂದು ಗುರುತಿಸಲಾಯಿತು. ಮಂಜುನಾಥ ಈತನು ಬಂದು ನನಗೆ ಹೇಳಿದಾಗ ಮುಂಜಾನೆ *9.00* ರಿಂದ *9.30* ಗಂಟೆ ಆಗಿತ್ತು. ಕೃಷ್ಣ ಈತನು ಬಿದ್ದಿದ್ದ ಸ್ಥಳ ಹೈವೇ-*18* ಹೋಟೇಲ್ ನ ರಸ್ತೆ, *6* ನೇ ಮೇನ್ ರಸ್ತೆ, ವಿ.ವಿ.ಪುರಂ ಇತ್ತು. ನಾನು ಫಿರ್ಯಾದಿಯಲ್ಲಿ ಮೃತ ಕೃಷ್ಣನಿಗೆ ಯಾರು ಹಲ್ಲೆ ಮಾಡಿರುತ್ತಾರೆ ಎಂದು ಹೇಳಿರುವುದಿಲ್ಲ. ನಂತರ ಪೊಲೀಸರು ಕೃತ್ಯ ನಡೆದ ಸ್ಥಳವನ್ನು ತೋರಿಸಲು ಕರೆದಿದ್ದರು. ನಾನು ಕೃತ್ಯ ನಡೆದ ಸ್ಥಳವನ್ನು ತೋರಿಸಿರುತ್ತೇನೆ. ಸ್ಥಳದಲ್ಲಿ ಪೊಲೀಸರು ನನ್ನ ಸಮಕ್ಷಮ ಫೊಟೋಗಳನ್ನು ತೆಗೆದುಕೊಂಡಿರುತ್ತಾರೆ. ಸಾಕ್ಷಿಯು ಸ್ಥಳ ಮಹಜರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಸ್ಥಳ ಮಹಜರನ್ನು ನಿ.ಪಿ.*2* ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.*2(ಎ)* ಎಂದು

ಗುರುತಿಸಲಾಯಿತು. ಸ್ಥಳದಲ್ಲಿ ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ವಶಪಡಿಸಿಕೊಂಡಿರುವುದಿಲ್ಲ. ನ್ಯಾಯಲಯದ ಮುಂದೆ ಇರುವ ಫೋಟೋಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಸದರಿ ಫೋಟೋಗಳನ್ನು ನಿ.ಪಿ.*3* ರಿಂದ ನಿ.ಪಿ.*6* ಎಂದು ಗುರುತಿಸಲಾಯಿತು.

***ಈ ಹಂತದಲ್ಲಿ, ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.***

***ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-***

. ನಾನು ದ್ವಿತಿಯ ಪಿ.ಯು.ಸಿ. ವರೆಗೆ ಓದಿರುತ್ತೇನೆ, ನಾನು ದಾಖಲಾತಿಗೆ ಸಹಿ ಮಾಡಬೇಕಾದರೆ ಅದರಲ್ಲಿ ಬರೆದ ವಿಷಯವನ್ನು ತಿಳಿದುಕೊಂಡು ಸಹಿ ಮಾಡುತ್ತೇನೆ ಎಂದರೆ ಸರಿ ಇದೆ. ಫಿರ್ಯಾದಿಯನ್ನು ನಾನೇ ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಘಟನೆ ದಿವಸ ಕೃಷ್ಣ ಸಹ ನಮ್ಮ ಜೊತೆ ಟೀ ಕುಡಿಯುತ್ತಾ ಕುಳಿತಿದ್ದನು ಎಂದರೆ ಸರಿ ಇದೆ. ಟೀ ಕುಡಿದ ನಂತರ ಮನೆಗೆ ಹೋಗುತ್ತೇನೆಂದು ಹೊರಟು ಹೋದನು ಎಂದರೆ ಸರಿ ಇದೆ, ಅದಾದ **5** ನಿಮಿಷಕ್ಕೆ ಮಂಜುನಾಥ ಈತನು ರಸ್ತೆಯ ಮೇಲೆ ಗಾಯಗೊಂಡು ಬಿದಿದ್ದನು ಎಂದು ಹೇಳಿರುತ್ತಾನೆ ಎಂದರೆ ಸರಿ ಇದೆ. ಸದರಿ ಕೃಷ್ಣ ಈತನು ಗಾಯಗೊಂಡು ಎಲೈಟ್ ರೂಪ ಹೋಟೇಲ್ ಹತ್ತಿರ ಬಿದ್ದಿದನು ಎಂದರೆ ಸರಿ ಇದೆ. ನಾನು ನೋಡಿದಾಗ ಆತನ ತಲೆಗೆ ಮಚ್ಚಿನಿಂದ ಹಲ್ಲೆ ಮಾಡಿದ ಬಗ್ಗೆ ಕಂಡು ಬಂದಿರುತ್ತದೆ ಎಂದರೆ ಸರಿ ಇದೆ. ನನ್ನ ಫಿರ್ಯಾದಿಯಲ್ಲಿ ನಾನು ಬೆಳಗ್ಗೆ **10.15** ರಿಂದ **10.30** ರ ನಡುವೆ ಯಾರೋ ದುರ್ಷ್ಕರ್ಮಿಗಳು ಕೃಷ್ಣ ಈತನಿಗೆ ಹಲ್ಲೆ ಮಾಡಿದ್ದಾರೆ ಫಿರ್ಯಾದಿಯಲ್ಲಿ ಹೇಳಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಫಿರ್ಯಾದಿಯಲ್ಲಿ ದೇವು ಹುಡುಗರ ಕೈವಾಡ ಇರುವುದರ ಬಗ್ಗೆ ಶಂಖೆ ಇರುತ್ತದೆ ಎಂದು ಬರೆದಿರುತ್ತೇನೆ ಎಂದರೆ ನನಗೆ ಗೊತ್ತಿಲ್ಲ. ಅಪೋಲೋ ಆಸ್ಪತ್ರೆಯ ಬಳಿ ನಾನು ಪೊಲೀಸರಿಗೆ ಫಿರ್ಯಾದಿ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನು ಕೆ ಆರ್ ಆಸ್ಪತ್ರೆಯಲ್ಲಿ ಇದ್ದಾಗ ನಾನು ಫಿರ್ಯಾದಿ ಕೊಟ್ಟಿರುತ್ತೇನೆ ಎಂದು ಹೇಳುತ್ತಾರೆ.

ಫಿರ್ಯಾದಿ ಕೊಟ್ಟ ನಂತರ ನಾನು ಪೊಲೀಸರಿಗೆ ಕೃತ್ಯ ನಡೆದ ಸ್ಥಳವನ್ನು ತೋರಿಸಿರುತ್ತೇನೆ ಎಂದರೆ ಸರಿ ಇದೆ. ಪೊಲೀಸರು ಸ್ಥಳದಲ್ಲಿ ಅದೇ ದಿನ ಸಾಯಂಕಾಲ **4.00** ರಿಂದ **5.00** ಗಂಟೆಯ ಸಮಯಕ್ಕೆ ನನ್ನ ಮತ್ತು ಮಂಜುನಾಥ ಮಹದೇವ ಇವರ ಸಮಕ್ಷಮ ಪಂಚನಾಮೆ ಮಾಡಿದ್ದಾರೆ ಎಂದು ಸೂಚಿಸುವುದು ಸರಿ ಇದೆ. ಪಂಚನಾಮೆ ಮಾಡುವ ಕಾಲಕ್ಕೆ ಪೊಲೀಸರು ರಕ್ತದ ಕಲೆಗಳು, ರಕ್ತ ಮಿಶ್ರಿತ ಮಣ್ಣು, ಮೃತ ಕೃಷ್ಣನ ಮೆದುಳಿನ **2** ಚೂರುಗಳನ್ನು ಪೊಲೀಸರು ಡಬ್ಬಿಯಲ್ಲಿ ಹಾಕಿ ನನ್ನ ಸಮಕ್ಷಮ ಸೀಲು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸ್ಥಳದಿಂದ ರಕ್ತವಲ್ಲದ ಮಣ್ಣನ್ನು ಕೂಡ ಡಬ್ಬಿಯಲ್ಲಿ ಹಾಕಿ ಸ್ಯಾಂಪಲ್ ಗಾಗಿ ಜಪ್ತಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಗೋಡೆಯ ಮೇಲೆ ಹತ್ತಿದ ಬಣ್ಣವನ್ನು ಕೂಡ ಜಪ್ತಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಹಲ್ಲೆಗೆ ಉಪಯೋಗಿಸಿದಿ ಆಯುಧದ ಮರದಿಂದ ಮಾಡಿರುವ ಹಿಡಿಕೆಯನ್ನು ಪೊಲೀಸರು ಜಪ್ತಿ ಮಾಡಿದರು ಎಂದರೆ ನನಗೆ ಗೊತ್ತಿಲ್ಲ. ಕಬ್ಬಿಣದ ಲಾಂಗು ಮಂಚು ಸ್ಥಳದಿಂದ ಜಪ್ತಿ ಮಾಡಿದರು ಎಂದರೆ ನನಗೆ ಗೊತ್ತಿಲ್ಲ. ಎರಡು ಜೊತೆ ಚಪ್ಪಲಿಗಳು ಕೂಡ ಜಪ್ತಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದ್ವಿಚಕ್ರ ವಾಹನದ ಬಿದ್ದ ಹೆಡ್ ಲೈಟ್, ಒಡೆದ ಇಂಡಿಕೇಟರ್ ಚೂರು ಮತ್ತು ಒಡೆದ ಹೆಲ್ಮೆಟ್ ನ ಗಾಜಿನ ಚೂರುಗುಳು ಮತ್ತು ಹೆಲ್ಮೆಟ್ ಹೋಂಡಾ ಆಕ್ಟಿವಾ ದ್ವಿಚಕ್ರವನ್ನು ಜಪ್ತಿ ಮಾಡಿಕೊಂಡರು ಎಂದರೆ ನನಗೆ ಗೊತ್ತಿಲ್ಲ. ಪೊಲೀಸರು ಸ್ಥಳದಿಂದ ಜಪ್ತಿ ಮಾಡಿದ ಎಲ್ಲಾ ವಸ್ತುಗಳ ಬಗ್ಗೆ ನನಗೆ ಮಾಹಿತಿ ಇದೆ ಎಂದರೆ ಸರಿಯಲ್ಲ. ಮಹಜರನಲ್ಲಿ ಬರೆದ ವಿಷಯವರನ್ನು ತಿಳಿದುಕೊಂಡು ಸಹಿ ಮಾಡಿದ್ದರೂ ಸಹ ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಃ ಆರೋಪಿ 1 ರಿಂದ 6 ಪರ ಟಿ.ಪಿ.ಡಿ. ವಕೀಲರಿಂದಃ-**

. ನಾನು ಮೃತ ಕೃಷ್ಣ, ಜಯಣ್ಣ, ರವಿ, ಶೇಖರ ಮತ್ತು ಅಶ್ವಿನ್ ಗೆಳೆಯರು ಎಂದರೆ ಸರಿ ಇದೆ. ನನಗೆ ಮೈಸೂರಿನ ಮಾದೇಶ ಅಲಿಯಾಸ್ ಅವ್ವ ಮಾದೇಶ ಈತನ ಪರಿಚಯ ಇರುತ್ತದೆ ಎಂದರೆ ಸರಿ ಇದೆ. ನಾನು ಹೈವೇ-**18** ಹೋಟೇಲ್ ನಲ್ಲಿ ಟೀ ಕುಡಿಯಲು ಸಾಮಾನ್ಯವಾಗಿ **9.00** ರಿಂದ **9.30** ಗಂಟೆಯವರೆಗೆ ಕುಳಿತಿದೆನು. ಟೀ ಕುಡಿದು ಕೃಷ್ಣ ಹೊರಡುವುದಕ್ಕಿಂತ ಮೊದಲು ಆತನಿಗೆ ಟೆಲಿಫೋನ್ ಕಾಲ್ ಬಂದಿತ್ತು ಅಥವಾ ಇಲ್ಲ ಎನ್ನುವುದು ನನಗೆ ಗೊತ್ತಿಲ್ಲ. ಕೃಷ್ಣ ಈತನು

ಹಬ್ಬ ಇದೆ ಹೋಗಬೇಕು ಎಂದು ಹೋಗಿರುತ್ತಾನೆ, ಕೃಷ್ಣ ಈತನು ಹೋಟೆಲ್ ಗೆ ಹೋಂಡಾ ಆಕ್ಟಿವಾ ದ್ವಿಚಕ್ರ ವಾಹದಲ್ಲಿ ಬಂದಿದ್ದನು ಮಂಜು ಬಂದು ನಮಗೆ ತಿಳಿಸುವವರೆಗೆ ನಾವು ಹೊಾಟೇಲ್ ನಲ್ಲಿ ಇದ್ದೆವು. ಮೃತ ಕೃಷ್ಣ ಈತನು ಹೋಟೆಲ್ ನಿಂದ ಹೋದ 10 ನಿಮಿಷದ ನಂತರ ಮಂಜು ಈತನು ಹೋಟೆಲ್ಗೆ ಬಂದಿದ್ದನು. ರೂಪಾ ಹೋಟೇಲ್ ಗೂ ಹೈವೆ-18 ಹೋಟೆಲಗೂ 100 ಮೀಟರ್ ದೂರ ಇರುತ್ತದೆ. ಸದರಿ 6 ನೇ ಮುಖ್ಯ ರಸ್ತೆಯಲ್ಲಿ ಸಾಕಷ್ಟು ಜನರ ಓಡಾಟ ಇರುತ್ತದೆ ಎಂದರೆ ಸರಿ ಇದೆ. ಮಂಜು ಈತನು ನಮಗೆ ಕೃಷ್ಣ ಈತನಿಗೆ ಹಲ್ಲೆಯಾದ ಬಗ್ಗೆ ತಿಳಿಸಿದನು. ನಾನು ಸ್ಥಳಕ್ಕೆ ಹೋದಾಗ ಸ್ಥಳದಲ್ಲಿ 10 ರಿಂದ 15 ಜನರು ಸೇರಿದ್ದರು. ನಾನು ಸ್ಥಳಕ್ಕೆ ಹೋದಾಗ ಕೃಷ್ಣ ಈತನು ಪ್ರಜ್ಞಾವಸ್ಥೆಯಲ್ಲಿದ್ದನು. ನಾನು, ಅಶ್ವಿನ್ ಮತ್ತು ಕುಮಾರ ಸ್ಥಳಕ್ಕೆ ಹೋಗಿದೆವು. ಕುಮಾರ ಈತನು ಘಟನೆ ಬಗ್ಗೆ ನಮಗೆ ಯಾವುದೇ ವಿಷಯವನ್ನು ಹೇಳಿರುವುದಿಲ್ಲ. ನಾವು ಆಸ್ಪತ್ರೆಗೆ ಹೋದ ತಕ್ಷಣ ಅವರ ಮನೆಯವರು ಬಂದಿದ್ದರು. ಆಸ್ಪತ್ರೆಯಲ್ಲಿ ಅವರೇ ದಾಖಲು ಮಾಡಿದರು. ಆಸ್ಪತ್ರೆಯಲ್ಲಿ ನಾನು *1* ಗಂಟೆ ಇದ್ದೆನು. ಆಸ್ಪತ್ರೆಯಲ್ಲಿ ಪೊಲೀಸರು ನನ್ನ ಸಹಿ ತೆಗೆದುಕೊಂಡಿರುವುದಿಲ್ಲ. ಕೆ ಆರ್ ಆಸ್ಪತ್ರೆಯ ಶವಾಗಾರದ ಬಳಿ ನನ್ನ ಸಹಿಯನ್ನು ತೆಗೆದುಕೊಂಡಿರುತ್ತಾರೆ. ಫಿರ್ಯಾದಿ ವಿ.ವಿ.ಪುರಂ ಪೊಲೀಸ್ ಇನ್ಸಪೆಕ್ಟರ್ ಇವರು ಅಲ್ಲಿ ಇದ್ದ ಯಾರಿಗೋ ಹೇಳಿ ಬರೆಸಿರುತ್ತಾರೆ, ನನಗೆ ಎಫ್.ಐ.ಆರ್. ಕಾಪಿಯನ್ನು ಕೊಟ್ಟಿರುವುದಿಲ್ಲ. ಕೆ ಆರ್ ಆಸ್ಪತ್ರೆಯಲ್ಲಿ ನಾನು ಅರ್ಧ ಗಂಟೆ ಇದ್ದೆನು. ಕೆ ಆರ್ ಆಸ್ಪತ್ರೆಯಲ್ಲಿ ನಾನು ಶವದ ಮೇಲಿರುವ ಗಾಯದ ಗುರುತುಗಳನ್ನು ನೋಡಿರುವುದಿಲ್ಲ. ಕೆ ಆರ್ ಆಸ್ಪತ್ರೆಯಲ್ಲಿ ನಾನು ಒಬ್ಬನೇ ಇದ್ದೆನು. ನಾನು ಶವ ಸಂಸ್ಕಾರದಲ್ಲಿ ಭಾಗಿಯಾಗಿದ್ದೆನು. ಶವಕ್ಕೆ ಅಗ್ನಿ ಸ್ಪರ್ಶ ಮಾಡಿ ಶವ ಸಂಸ್ಕಾರ ವನ್ನು ಮಾಡಿರುತ್ತಾರೆ. ಶವ ಸಂಸ್ಕಾರಕ್ಕೆ ಸುಮಾರು ***200*** ರಿಂದ ***300*** ಜನ ಭಾಗಿಯಾಗಿದ್ದರು. ಶವ ಸಂಸ್ಕಾರ ದಲ್ಲಿ ಕುಮಾರ ಮೃತನ ಅಣ್ಣನ ಮಗ ಇದ್ದನು. ನಾನು ಮೃತ ಕೃಷ್ಣನ ಮನೆಯವರ ಜೊತೆ ಶವ ಸಂಸ್ಕಾರದ ಸಮಯದಲ್ಲಿ ಮಾತನಾಡಿರುವುದಿಲ್ಲ. ನಾನು ಕೃತ್ಯ ನಡೆದ ಸ್ಥಳವನ್ನು ತೋರಿಸಲು ಸ್ಥಳಕ್ಕೆ ಹೋದಾಗ ಅಲ್ಲಿ ಸುಮಾರು ***5-6*** ಜನ ಪೊಲೀಸರು ಇದ್ದರು. ನಾವು ಕೃಷ್ಣ ಈತನು ಸ್ಥಳದಲ್ಲಿ ಬಿದ್ದಿದ್ದಾನೆ ಎಂದು ತಿಳಿದ ತಕ್ಷಣ ಅಲ್ಲಿ ಪೊಲೀಸರು ಇದ್ದಿರಲಿಲ್ಲ.

**ಪಾಟೀ ಸವಾಲು ಃ ಆರೋಪಿ 7 ಪರ ಜೆ.ವಿ.ಆರ್, ವಕೀಲರಿಂದಃ-**

. ಆರೋಪಿ 7 ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಪಾಟೀ ಸವಾಲು ಃ ಆರೋಪಿ 8, 10, 11 ಮತ್ತು 12 ರ ಪರ ಜಿ.ಎಂ.ಎನ್. ವಕೀಲರಿಂದಃ-**

.ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳುತ್ತೇನೆ.

**ಪಾಟೀ ಸವಾಲು ಃ ಆರೋಪಿ 9 ಪರ ಯು.ಎಸ್. ವಕೀಲರಿಂದಃ-**

.ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳುತ್ತೇನೆ.

***ಮರು ವಿಚಾರಣೆಃ- ಇಲ್ಲ.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
*ಮೈಸೂರು*